ಅವರ ಪ್ರಕಾರ ‘ಮದುವೆಗಳಲ್ಲಿ ಕ್ಯಾಂಡಿಡ್ ಅಥವಾ ಕಂಟೆಪರರಿ ಛಾಯಾಗ್ರಹಣ ಹೆಚ್ಚು ಜನಪ್ರಿಯವಾಗಿದೆ. ಅಲ್ಲದೆ ಇತ್ತೀಚೆಗೆ ಕ್ಯಾಂಡಿಡ್ ಹೈಲೈಟ್ಸ್ ಎಂಬ ಹೊಸ ಮಜಲು ಹುಟ್ಟಿಕೊಂಡಿದೆ. ಅಂದರೆ ಯಾರಿಗೂ ಈಗ ಗಂಟೆಗಟ್ಟಲೆ ಕೂತು ವಿಡಿಯೊ ಆಸ್ವಾದಿಸುವ ಮನಸ್ಸಿಲ್ಲ. ಹೀಗಾಗಿ ಮದುವೆಯ ಮುಖ್ಯ ಸನ್ನಿವೇಶಗಳ ಚಿಕ್ಕ ಚಿಕ್ಕ ವಿಡಿಯೊ ಮಾಡಲಾಗುತ್ತದೆ. ಜೊತೆಗೆ ಇಂದಿನವರಿಗೆ ಆಲ್ಬಂ ಬಗ್ಗೆ ಹೆಚ್ಚು ಆಸ್ಥೆ ಇಲ್ಲ. ಮನೆಯಲ್ಲಿ ಹಿರಿಯರಿದ್ದರೆ ಆಲ್ಬಂ ಕೇಳುತ್ತಾರೆ. ಇಲ್ಲವಾದರೆ ಎಲ್ಲರ ಬಳಿ ಮೊಬೈಲ್ ಇದೆ, ಲ್ಯಾಪ್‌ಟಾಪ್ ಇದೆ, ಟೀವಿಯಲ್ಲಿ ಹಾಕಿ ನೋಡಬಹುದು. ಹೀಗಾಗಿ ಸಾಫ್ಟ್ ಕಾಪಿಯನ್ನೇ ಕೇಳುತ್ತಾರೆ’ ಎನ್ನುತ್ತಾರೆ.

‘ಗಂಡು ಹೆಣ್ಣಿನ ಕಡೆಯವರು ಮಾತನಾಡಿಕೊಂಡು ಒಬ್ಬರೇ ಫೋಟೊಗ್ರಾಫರ್ ಅನ್ನು ಗೊತ್ತುಪಡಿಸಿಕೊಳ್ಳುವುದು ಅನುಕೂಲ. ಪ್ರಿವೆಡ್ಡಿಂಗ್ ವಿಷಯಕ್ಕೆ ಬಂದರೆ ಒಂದು ತಿಂಗಳ ಮೊದಲೇ ಶೂಟಿಂಗ್ ಮುಗಿಸಿಬಿಡಬೇಕು. ಇಲ್ಲವಾದರೆ ಕೊನೆಕೊನೆಗೆ ಸರಿಯಾಗಿ ಸಮಯ ಸಿಗುವುದೇ ಇಲ್ಲ. ಇನ್ನೊಂದು ಮುಖ್ಯ ವಿಷಯ ಎಂದರೆ ಎಂಗೇಜ್ಮೆಂಟ್‌ನಿಂದ ಹಿಡಿದು ಮೆಹೆಂದಿ ಶಾಸ್ತ್ರ, ಪ್ರಿವೆಡ್ಡಿಂಗ್, ಮದುವೆ, ಆರತಕ್ಷತೆ ಎಲ್ಲದಕ್ಕೂ ಒಬ್ಬರೇ ಛಾಯಾಗ್ರಾಹಕರನ್ನು ಅವಲಂಬಿಸುವುದು ಒಳ್ಳೆಯದು. ಇದರಿಂದ ಬಜೆಟ್ ಕೂಡ ಕಮ್ಮಿ ಆಗುತ್ತದೆ. ಜೊತೆಗೆ ಆ ಛಾಯಾಗ್ರಾಹಕನ ಜೊತೆ ಕುಟುಂಬದವರಿಗೆ ಸಲಿಗೆಯೂ ಬೆಳೆದಿರುತ್ತದೆ. ಇದು ಛಾಯಾಗ್ರಹಣ ಹೆಚ್ಚು ನೈಸರ್ಗಿಕವಾಗಿ ಬರಲು ಕಾರಣವಾಗುತ್ತದೆ. ಛಾಯಾಗ್ರಹಣದ ವಿಷಯ ಬಂದಾಗ ಬೆಳಕು ಪ್ರಮುಖ ಪಾತ್ರ ವಹಿಸುತ್ತದೆ. ಛಾಯಾಗ್ರಾಹಕರನ್ನು ಕೇಳಿ ಡೆಕೊರೇಶನ್ ಕಲರ್, ಲೈಟಿಂಗ್ ನಿರ್ಧರಿಸುವವರೂ ಇರುತ್ತಾರೆ. ಹೆಚ್ಚಾಗಿ ವೆಡ್ಡಿಂಗ್ ಪ್ಲಾನರ್ಸ್ ಇಂಥ ಸೂಕ್ಷ್ಮ ವಿಷಯಗಳನ್ನು ಗಮನಿಸುತ್ತಾರೆ. ಜೊತೆಗೆ ಬಣ್ಣಗಳೂ ಮುಖ್ಯ ಪಾತ್ರ ವಹಿಸುತ್ತವೆ. ಹೆಚ್ಚಾಗಿ ಮದುಮಕ್ಕಳ ದಿರಿಸಿನ ಬಣ್ಣಕ್ಕೆ ಹೋಲಿಕೆಯಾಗುವ ಹಾಗೂ ಕಾಂಟ್ರಾಸ್ಟ್ ಬಣ್ಣಗಳನ್ನು ಡೆಕೊರೇಶನ್‌ನಲ್ಲಿ ಬಳಸಿಕೊಳ್ಳುವಂತೆಯೂ ನಾವು ಸಲಹೆ ನೀಡುವುದಿದೆ’ ಎಂದು ಮಾಹಿತಿ ನೀಡುತ್ತಾರೆ ಅವರು.

ನಗರ ಪ್ರದೇಶಗಳಲ್ಲಿಯಷ್ಟೇ ಅಲ್ಲದೆ ಇತ್ತೀಚೆಗೆ ಹಳ್ಳಿಗಳಲ್ಲಿಯೂ ಪ್ರಿವೆಡ್ಡಿಂಗ್ ಛಾಯಾಗ್ರಹಣಕ್ಕೆ ಬೇಡಿಕೆ ಬರುತ್ತಿದೆ. ‘ಊರಿನಲ್ಲಿ ಪರಿಸ್ಥಿತಿ ಮೊದಲಿಗಿಂತ ತೀರಾ ಏನೂ ಬದಲಾಗಿಲ್ಲ. ಹಳ್ಳಿಯಲ್ಲೇ ವಾಸ್ತವ್ಯ ಹೂಡಿದವರು ಪ್ರಿವೆಡ್ಡಿಂಗ್ ಗೋಜಿಗೆ ಹೋಗುವುದಿಲ್ಲ. ಆದರೆ ಕೆಲಸದ ನಿಮಿತ್ತ ಬೆಂಗಳೂರನ್ನು ಆಶ್ರಯಿಸಿದ ಇಲ್ಲಿನ



ಶ್ರೀಪಾದ ಹೆಗಡೆ



## ಬಾರಿ ಮದುವೆಗಳು

ಭಾರತದಲ್ಲಿ ಸಾಂಪ್ರದಾಯಿಕ ಮದುವೆಗಳಿಗೇ ಮೊದಲ ಆದ್ಯತೆ. ಬದುಕಿನ ಒಂದೇ ಒಂದು ಅವಿಸ್ಮರಣೀಯ ಕ್ಷಣವಾಗಬಲ್ಲ ಈ ದಿನಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಮಂದಿ ನಮ್ಮ ಮಧ್ಯೆ ಇದ್ದಾರೆ. ಭಾರತದ ಶ್ರೀಮಂತ ವ್ಯಕ್ತಿಗಳಲ್ಲೊಬ್ಬರಾಗಿರುವ ಮುಖೇಶ್ ಅಂಬಾನಿ ತಮ್ಮ ಮಗಳು ಇಶಾ ಅಂಬಾನಿ ಮದುವೆಯನ್ನು ದಾಂಧೂಂ ಆಗಿ ಮಾಡಿದರು. ಕಾಸ್ಟ್ಯೂಮ್, ಮೇಕಪ್, ಉಡುಗೊರೆಗಳಷ್ಟೇ ಅಲ್ಲ, ಬಂದ ಅತಿಥಿಗಳಿಗೂ ಅದ್ದೂರಿ ಆತಿಥ್ಯ ಸಿಕ್ಕಿತು. ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ವಾಸ್ತವ್ಯ, ಹಾಲಿವುಡ್ ಜನಪ್ರಿಯ ಗಾಯಕಿ ಬಿಯಾನ್ಸ್ ಅವರಿಂದ ಗಾನಸುಧೆ. ನೂರಾರು ವಿಮಾನಗಳು, ಸಾವಿರಾರು ಕಾರುಗಳು ಅತಿಥಿಗಳ ಪ್ರಯಾಣದ ಸಾರಥ್ಯ ವಹಿಸಿದ್ದವು. ಇನ್ನೂ ಹಲವಾರು ವೈಶಿಷ್ಟ್ಯ ಹೊಂದಿದ್ದ ಇಶಾ ಮದುವೆಗೆ ಖರ್ಚಾದ ಹಣ ಅಂದಾಜು ₹ 724 ಕೋಟಿ! ಎಂದು ಹೇಳಲಾಗುತ್ತದೆ. ಇನ್ನು ಅನೇಕ ಸಿರಿವಂತರು ತಮ್ಮ ಮಕ್ಕಳ ಮದುವೆಗೆ ₹ 500 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿದ್ದಾರೆ.

ಮದುವೆಯ ವೈಭವವನ್ನು ಸಾಕ್ಷೀಕರಿಸುವಂತೆ ಬಾಲಿವುಡ್ ಸೆಲೆಬ್ರಿಟಿಗಳನೇಕರ ಮದುವೆಗಳು ನಡೆದಿವೆ. ಸಾಲುಸಾಲಾಗಿ ವಿರಾಟ್ ಕೊಹ್ಲಿ – ಅನುಷ್ಕಾ ಶರ್ಮಾ, ದೀಪಿಕಾ ಪಡುಕೋಣೆ – ರಣವೀರ್ ಸಿಂಗ್, ಕರೀನಾ ಕಪೂರ್ – ಸೈಫ್ ಅಲಿಖಾನ್, ಪ್ರಿಯಾಂಕಾ ಚೋಪ್ರಾ – ನಿಕ್ ಜೊನಾಸ್ ಅವರ ಮದುವೆಗಳೂ ಭರ್ಜರಿಯಾಗಿ ನಡೆದವು. ಮಾಧ್ಯಮಗಳೂ ಈ ವೈಭವವನ್ನು ಇನ್ನಷ್ಟು ವೈಭವೀಕರಿಸಿ ಪ್ರಪಂಚದಾದ್ಯಂತ ಜನತೆ ಕಣ್ಣರಳಿಸಿ ನೋಡುವಂತೆ ಮಾಡಿತ್ತು. ಜನಾರ್ದನ್ ರೆಡ್ಡಿ ತಮ್ಮ ಮಗಳು ಬ್ರಾಹ್ಮಿಣಿ ಮದುವೆಗೆ ₹500 ಕೋಟಿ ರೂಪಾಯಿ ಖರ್ಚು ಮಾಡಿದ್ದರು ಎನ್ನುವ ಸುದ್ದಿಯೂ ಗರಿಗೆದರಿತ್ತು.